# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 76(700+617) |
| ಸದಸ್ಯರ ಹೆಸರು: | ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಮತ್ತು ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 19.09.2022 |
| ಉತ್ತರಿಸಬೇಕಾದ ಸಚಿವರು: | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಶಾಲಾ ಪಠ್ಯ ಪುಸ್ತಕಗಳಲ್ಲಿ "ಭಗವದ್ಗೀತೆ" ಯನ್ನು ಬೋಧಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಈವರೆಗೂ ಕೈಗೊಂಡ ಕ್ರಮಗಳೇನು;</td><td rowspan="2">ಪ್ರಸ್ತುತ ಶಾಲಾ ಪಠ್ಯ ಪುಸ್ತಕಗಳಲ್ಲಿ ಭಗವದ್ಗೀತೆಯನ್ನು ಪ್ರತ್ಯೇಕವಾಗಿ ಬೋಧಿಸುವ ವಿಚಾರ ಸರ್ಕಾರದ ಮುಂದೆ ಇರುವುದಿಲ್ಲ.</td></tr>
<tr><td>(ಆ)</td><td>ಯಾವ ಶೈಕ್ಷಣಿಕ ವರ್ಷದಿಂದ ಶಾಲೆಗಳಲ್ಲಿ ಭಗವದ್ಗೀತೆಯನ್ನು ಬೋಧಿಸಲು ಸರ್ಕಾರ ಕ್ರಮ ಕೈಗೊಂಡಿದೆ; ಯಾವ ಯಾವ ತರಗತಿಗಳಿಗೆ ಭಗವದ್ಗೀತೆಯನ್ನು ಬೋಧಿಸಲು ಸರ್ಕಾರ ಚಿಂತನೆ ನಡೆಸಿದೆ? (ವಿವರ ನೀಡುವುದು)</td></tr>
<tr><td>(ಇ)</td><td>ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಪಠ್ಯಪುಸ್ತಕಗಳಲ್ಲಿ ಸ್ಥಳೀಯ ರಾಜರ ಇತಿಹಾಸದ ಕುರಿತು ಮಕ್ಕಳಿಗೆ ಬೋಧಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ;</td><td rowspan="2">6 ರಿಂದ 10ನೇ ತರಗತಿಗಳ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಸ್ಥಳೀಯ ರಾಜರ ಇತಿಹಾಸದ ಕುರಿತು ಹಾಗೂ ಕರ್ನಾಟಕ ರಾಜ್ಯದಲ್ಲಿ ಆಳ್ವಿಕೆ ಮಾಡಿದ ರಾಜಮನೆತನಗಳ ಕುರಿತ ಪಠ್ಯ ರಚಿಸಿ ಅಳವಡಿಸಲಾಗಿರುತ್ತದೆ.<br><br>(ವಿವರವನ್ನು ಅನುಬಂಧದಲ್ಲಿರಿಸಿದೆ)<br><br>ಮುಂದಿನ ಪಠ್ಯ ಪುಸ್ತಕ ಪುನರ್ ರಚನೆಯ ಸಂದರ್ಭದಲ್ಲಿ ಜಿಲ್ಲೆಗಳ ಸ್ಥಳೀಯ ಇತಿಹಾಸವನ್ನು ಆಯಾ ಜಿಲ್ಲೆಯ ಮಕ್ಕಳಿಗೆ ತಿಳಿಸುವ ಕುರಿತಂತೆ ತಜ್ಞರ ಸಲಹೆಯ ಮೇರೆಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು.</td></tr>
<tr><td>(ಈ)</td><td>ಕರ್ನಾಟಕ ರಾಜ್ಯದಲ್ಲಿ ಹಲವಾರು ರಾಜಮನೆತನಗಳು ಆಳ್ವಿಕೆ ಮಾಡಿದ್ದು, ಇದರಲ್ಲಿ ಯಾವ ಯಾವ ರಾಜರ ರಾಜಮನೆತನಗಳ ಕುರಿತು ಪಠ್ಯ ರಚಿಸಿ, ಶಾಲಾ ಮಕ್ಕಳಿಗೆ ಬೋಧಿಸಲಾಗುತ್ತಿದೆ. ಕನಿಷ್ಠ ಆಯಾಯ ಜಿಲ್ಲೆಯ ಮಕ್ಕಳಿಗಾದರು ತಮ್ಮ ಸ್ಥಳೀಯ ಇತಿಹಾಸದ ಕುರಿತು ತಿಳುವಳಿಕೆ ನೀಡಲು ಸರ್ಕಾರ ಯಾವ ಕ್ರಮಕೈಗೊಂಡಿದೆ; (ವಿವರ ನೀಡುವುದು)</td></tr>
</table>

| | | |
|---|---|---|
| (ಉ) | ಉಡುಪಿ ಜಿಲ್ಲೆಯ ಬಾರ್ಕೂರಿನ ಆಳುಪ ರಾಜಮನೆತನದ ಕುರಿತು ಸ್ಥಳೀಯ ಶಾಲೆಗಳ ಮಕ್ಕಳಿಗೆ ಪಾಠ ಮಾಡಲಾಗುತ್ತಿದೆಯೇ; ಈ ಕುರಿತು ಸರ್ಕಾರದ ನಿಲುವೇನು? | ಪ್ರಸ್ತುತ ಜಾರಿಯಲ್ಲಿರುವ 7ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದ "ಮೈಸೂರು ಮತ್ತು ಇತರ ಸಂಸ್ಥಾನಗಳು" ಅಧ್ಯಾಯದಲ್ಲಿ ತುಳು ನಾಡು ಎಂಬ ಪ್ರತ್ಯೇಕವಾದ ಉಪ ಘಟಕವಿದ್ದು, ತುಳುನಾಡಿನಲ್ಲಿ ಆಳಿದಂತಹ ಅರಸು ಮನೆತನಗಳ, ಬಾರ್ಕೂರು ರಾಜಧಾನಿಯ ಆಳುಪ ಮನೆತನದ ವಿವರ ಉಪ ಘಟಕದಲ್ಲಿದೆ.<br>6ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದ "ನಮ್ಮ ಹೆಮ್ಮೆಯ ರಾಜ್ಯ ಕರ್ನಾಟಕ" ಎಂಬ ಪಾಠದಲ್ಲಿ ಕರ್ನಾಟಕ ಕರಾವಳಿ ಪ್ರದೇಶ ಆಳುಪ ಮನೆತನದ ಅರಸರ ಬಗ್ಗೆ ಉಲ್ಲೇಖವಿದೆ.<br><br>ಇದಲ್ಲದೆ, 6 ರಿಂದ 10ನೇ ತರಗತಿಗೆ ತೃತೀಯ ಭಾಷೆಯಾಗಿ ಅಳವಡಿಸಲಾಗಿರುವ ತುಳು ಪಠ್ಯಪುಸ್ತಕಗಳಲ್ಲಿ ತುಳುನಾಡಿನ ಆಡಳಿತ, ಕಲೆ, ಸಂಸ್ಕೃತಿ, ಭಾಷೆ ಮುಂತಾದವುಗಳ ಬಗ್ಗೆ ಅನೇಕ ಪಾಠ/ಪದ್ಯಗಳನ್ನು ಅಳವಡಿಸಿದೆ. |

ಇಪಿ 307 ಪಿಎಂಸಿ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು

ಅನುಬಂಧ -1

ತರಗತಿವಾರು ಪಠ್ಯಪುಸ್ತಕಗಳಲ್ಲಿ ನೀಡಿರುವ ಕರ್ನಾಟಕ ರಾಜ್ಯದಲ್ಲಿ ಆಳ್ವಿಕೆ ನಡೆಸಿದ ರಾಜಮನೆತನಗಳ ವಿವರ

| ತರಗತಿ | ಅಧ್ಯಾಯದ ಹೆಸರು | ಕರ್ನಾಟಕ ರಾಜ್ಯದಲ್ಲಿ ಆಳ್ವಿಕೆ ನಡೆಸಿದ ರಾಜಮನೆತನಗಳ ಸಂಕ್ಷಿಪ್ತ ವಿವರ |
|---|---|---|
| 6 | ನಮ್ಮ ಹೆಮ್ಮೆಯ ರಾಜ್ಯ - ಕರ್ನಾಟಕ | ಗಂಗರು, ಚೋಳರು, ಹೊಯ್ಸಳರು, ಮರಾಠರು, ಮೈಸೂರು ಒಡೆಯರು ಮತ್ತು ವಿಜಯಪುರದ ಆದಿಲ್‌ಶಾಹಿ, ಶಾತವಾಹನರು, ಕಲ್ಯಾಣ ಚಾಲುಕ್ಯರು, ಬಹಮನಿ, ವಿಜಯನಗರ ಸಾಮ್ರಾಜ್ಯ, ಸುರಪುರ ನಾಯಕರು, ರಾಷ್ಟ್ರಕೂಟರು, ಮೌರ್ಯರು, ಕಿತ್ತೂರು ಸಾಮ್ರಾಜ್ಯ. |
| 6 | ಮೌರ್ಯರು ಮತ್ತು ಕುಷಾಣರು | ಚಂದ್ರಗುಪ್ತ ಮೌರ್ಯ, ಚಾಣಕ್ಯನ ಕುರಿತು. ಮೌರ್ಯರ ಆಡಳಿತ ಪದ್ಧತಿ, ಕುಷಾಣ ವಂಶದ ಕನಿಷ್ಕನ ಸಾಧನೆಗಳು, ಕಲೆ ಮತ್ತು ವಾಸ್ತು ಶಿಲ್ಪಕ್ಕೆ ನೀಡಿದ ಕೊಡುಗೆಗಳು, ಅಶೋಕನ ಜೀವನ ಮತ್ತು ಸಾಧನೆಗಳು |
| 6 | ಗುಪ್ತರು ಮತ್ತು ವರ್ಧನರು | ಸಮುದ್ರಗುಪ್ತ ಮತ್ತು ಎರಡನೇ ಚಂದ್ರಗುಪ್ತರ ಆಡಳಿತ, ಸಾಹಿತ್ಯ, ಕಲೆ, ಮತ್ತು ಮುಖ್ಯ ಕೊಡುಗೆಗಳು.<br>ಬಾದಾಮಿಯ ಚಾಳುಕ್ಯರು ಮತ್ತು ಕಾಂಚಿಯ ಪಲ್ಲವರ ಮುಖ್ಯ ಕೊಡುಗೆಗಳು |
| 6 | ದಕ್ಷಿಣ ಭಾರತದ ಪ್ರಾಚೀನ ರಾಜವಂಶಗಳು | ಶಾತವಾಹನರು, ಕದಂಬರು, ಗಂಗರು, ಚಾಳುಕ್ಯರು, ಕಂಚಿಯ ಪಲ್ಲವರು, ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಹೊಯ್ಸಳರು, ಚೋಳರ ಕೊಡುಗೆಗಳು ಮತ್ತು ಆಡಳಿತ ವ್ಯವಸ್ಥೆ |
| 6 | ವಿಜಯನಗರ ಸಾಮ್ರಾಜ್ಯ ಹಾಗೂ ಬಹಮನಿ ರಾಜ್ಯ | ವಿಜಯನಗರ ಸಾಮ್ರಾಜ್ಯ ಮತ್ತು ಬಹಮನಿ ಸುಲ್ತಾನರ ಆಡಳಿತ ಪದ್ಧತಿ ಮತ್ತು ಕೊಡುಗೆಗಳು |
| 7 | ಮೈಸೂರು ಮತ್ತು ಇತರ ಸಂಸ್ಥಾನಗಳು | ಮೈಸೂರು ಒಡೆಯರು, ಹೈದರಾಲಿ ಮತ್ತು ಟಿಪ್ಪು,ಸುರಪುರ ನಾಯಕರು, ಕಿತ್ತೂರು ರಾಣಿ ಚೆನ್ನಮ್ಮಾಜಿಯ ವೀರಗಾಥೆ ಮತ್ತು ಸಂಗೊಳ್ಳಿ ರಾಯಣ್ಣ, ಕೆಳದಿಯ ನಾಯಕರು, ಚಿತ್ರದುರ್ಗದ ನಾಯಕರು, ಯಲಹಂಕ ನಾಡಪ್ರಭುಗಳು, ಕೊಡಗಿನ ಚರಿತ್ರೆ, ತುಳು ನಾಡಿನ ಇತಿಹಾಸ, ಸಂಸ್ಕೃತಿ ಹಾಗೂ ಕೊಡುಗೆಗಳು, ಬೇಡ ನಾಯಕರ ದಂಗೆಗಳು. |
| 8 | ದಕ್ಷಿಣ ಭಾರತದ ರಾಜವಂಶಗಳು | ಶಾತವಾಹನರು, ಕದಂಬರು, ಗಂಗರು, ಚಾಳುಕ್ಯರು, ಕಂಚಿಯ ಪಲ್ಲವರು, ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಹೊಯ್ಸಳರು, ಚೋಳರ ಕೊಡುಗೆಗಳು ಮತ್ತು ಆಡಳಿತ ವ್ಯವಸ್ಥೆ |
| 9 | ವಿಜಯನಗರ ಸಾಮ್ರಾಜ್ಯ ಮತ್ತು ಬಹಮನಿ ರಾಜ್ಯ | ಶ್ರೀ ಕೃಷ್ಣದೇವರಾಯನ ಸಾಧನೆಗಳು ಮತ್ತು ಕೊಡುಗೆಗಳು, ಬಹಮನಿ ರಾಜ್ಯದ ಕೊಡುಗೆಗಳು |
| 10 | ಕರ್ನಾಟಕದಲ್ಲಿ ಬ್ರಿಟೀಷ್ ಆಳ್ವಿಕೆ ಪ್ರತಿರೋಧಗಳು ಹಾಗೂ ಮೈಸೂರಿನ ಒಡೆಯರು | ಮೈಸೂರಿನ ಪ್ರಮುಖ ಒಡೆಯರುಗಳು, ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಅಮರ ಸುಳ್ಯ ಬಂಡಾಯ, ದೋಂಡಿಯಾ ವಾಘ್, ಹಲಗಲಿ ಬೇಡರ ದಂಗೆ, ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ, ಸುರಪುರದ ನಾಯಕರು, |

ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)